(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

09KA2004SGC035177
ಕಛೇರಿ ವಿಳಾಸ
29, 80 ಅಡಿ ರಸ್ತೆ, ವಿಜಯ ನಗರ, 2 ನೇ ಹಂತ,
ಮೈಸೂರು–570 017.
Phone No: 0821-2417104/110, Web: cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನ ಉಪವಿಭಾಗ, ಚಾ.ವಿ.ಸ.ನಿ.ನಿ,
ರಾಮನಾಥಪುರ– 573133.
Phone: 08175-225040 E-Mail- aeecescrnpura@gmail.com

ಕ್ರಸಂ/ಸೆಸ್ಕ್/ಸಕಾನಿಇ(ವಿ)/ಸಇಂ(ವಿ)/ಹಿಸ/ರಾನಾಪುರ/2017–18/ 1086-90 ದಿನಾಂಕ: 06-10-17

# ಜನ ಸಂಪರ್ಕ ಸಭೆ

ದಿನಾಂಕ:–15.09.2017 ರಂದು ಬೆಳಿಗ್ಗೆ 10:30 ಘಂಟೆಗೆ ಶ್ರೀ ಸುಚೇತನ್, ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ, ಚಾವಿಸನಿನಿ, ಹಾಸನ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ರಾಮನಾಥಪುರ ಉಪ-ವಿಭಾಗ ಕಛೇರಿಯಲ್ಲಿ ನಡೆಸಲಾಯಿತು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:–

1) ಶ್ರೀ ಸ್ವಾಮಿಗೌಡ, ಕಾರ್ಯಪಾಲಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಹೊಳೆನರಸೀಪುರ.
2) ಶ್ರೀಮತಿ ಲತಾ, ಲೆಕ್ಕಾಧಿಕಾರಿಗಳು, ಹೊಳೆನರಸೀಪುರ ವಿಭಾಗ.
3) ಶ್ರೀಮತಿ ಸೌಭಾಗ್ಯ ಲಕ್ಷ್ಮಿ, ಆಂತರಿಕ ಲೆಕ್ಕ ಪರಿಶೋದನೆ, ಹೊಳೆನರಸೀಪುರ ವಿಭಾಗ.
4) ಶ್ರೀ ಮಂಜುನಾಥ, ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ರಾಮನಾಥಪುರ ಉಪವಿಭಾಗ.
5) ಶ್ರೀ ಧರ್ಮೇಶ್, ಸಹಾಯಕ ಇಂಜಿನಿಯರ್(ವಿ), ಕೊಣನೂರು ಶಾಖೆ.
6) ಶ್ರೀ ರಂಗೇಗೌಡ , ಕಿರಿಯ ಇಂಜಿನಿಯರ್(ವಿ), ರಾಮನಾಥಪುರ ಶಾಖೆ.
7) ಶ್ರೀ ಪ್ರದೀಪ್ ಕುಮಾರ್, ಕಿರಿಯ ಇಂಜಿನಿಯರ್(ವಿ), ಬಸವಾಪಟ್ಟಣ ಶಾಖೆ.
8) ಶ್ರೀ ಮಂಜುನಾಥ, ಕಿರಿಯ ಇಂಜಿನಿಯರ್(ವಿ), ದೊಡ್ಡಮಗ್ಗೆ ಶಾಖೆ.
9) ಶ್ರೀ ಆಂಜನೇಯ ಬಿ, ಹಿರಿಯ ಸಹಾಯಕರು (ಪ್ರಭಾರಿ), ರಾಮನಾಥಪುರ ಉಪವಿಭಾಗ.
10) ಶ್ರೀ ಮಹೇಶ್, ಹಿರಿಯ ಸಹಾಯಕರು (ಪ್ರಭಾರಿ), ಕೊಣನೂರು ಶಾಖೆ.

**********

ಕಾರ್ಯಪಾಲಕ ಇಂಜಿನಿಯರ್(ವಿ) ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು ಹಾಗೂ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭ ಮಾಡಿದರು. ಸಭೆಯಲ್ಲಿ ಚರ್ಚಿಸಲಾದ ವಿವರಗಳು ಈ ಕೆಳಕಾಣಿಸಿದಂತಿರುತ್ತದೆ.

| ಕ್ರ.ಸಂ | ಗ್ರಾಹಕರ ಹೆಸರು | ಶಾಖೆ | ದೂರುಗಳ ವಿವರ | ಷರಾ |
|---|---|---|---|---|
| 1 | ಬಸಪ್ಪ, ಕೂಡಲೂರು. ಫೋ–7353732546 ರಂಗರಾಜೇಗೌಡ, ಕೂಡಲೂರು. ಫೋ–9611082708 | ರಾಮನಾಥಪುರ | ಕೂಡಲೂರು ಗ್ರಾಮದಲ್ಲಿ ಅಕ್ರಮ-ಸಕ್ರಮ ಯೋಜನೆಯಡಿ ಪರಿವರ್ತಕ ಅಳವಡಿಸಿದ್ದುದ್ದರ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿರುತ್ತಾರೆ ಹಾಗೂ ಕೂಡಲೂರು ಗ್ರಾಮದಲ್ಲಿ ನಿರಂತರ ಜ್ಯೋತಿ ಮಾರ್ಗದಲ್ಲಿ ಹಾಲಿ ಇರುವ 63ಕೆ.ವಿ.ಎ ಪರಿವರ್ತಕದ ಮೇಲೆ ಸುಮಾರು 200 ಮನೆಗಳಿರುವುದರಿಂದ ಪರಿವರ್ತಕದ ಮೇಲೆ ಅಧಿಕ ಹೊರೆ ಇದೆ ಎಂದು ತಿಳಿಸಿರುತ್ತಾರೆ. | ಕೂಡಲೂರು ಗ್ರಾಮದಲ್ಲಿ ಹಾಲಿ ಇರುವ 63ಕೆ.ವಿ.ಎ ಪರಿವರ್ತಕವು ಅಧಿಕ ಹೊರೆ ಇರುವುದನ್ನು ಪರಿಶೀಲಿಸಿ, ಅವಶ್ಯವಿದ್ದಲ್ಲಿ ಅಧಿಕ ಹೊರೆಗೆ ತಕ್ಕಂತೆ ಹೆಚ್ಚುವರಿ ಪರಿವರ್ತಕ ಅಳವಡಿಸಲು ಅಂದಾಜು ಪಟ್ಟಿ ತಯಾರಿಸಲು ಸಭೆಯ ಅಧ್ಯಕ್ಷರು ಸಂಬಂದಿಸಿದ ಶಾಖಾದಿಕಾರಿಗಳಿಗೆ ಸೂಚಿಸಲಾಯಿತು. |
| 2 | ಪರುಶುರಾಮ್, ಚಿದಾನಂದ, ಅಶೋಕ್ ವಿದ್ಯುತ್ ಗುತ್ತಿಗೆದಾರರು. | ರಾಮನಾಥಪುರ ಉಪ-ವಿಭಾಗ | ರಾಮನಾಥಪುರ ಉಪ-ವಿಭಾಗಕ್ಕೆ ಲಾರಿ ವ್ಯವಸ್ಥೆ ಮಾಡುವ ಬಗ್ಗೆ. | ರಾಮನಾಥಪುರ ಉಪ-ವಿಭಾಗಕ್ಕೆ ತಿಂಗಳಲ್ಲಿ 04 ದಿನಗಳು ಲಾರಿ ವ್ಯವಸ್ಥೆ ಮಾಡಬೇಕೆಂದು ಸಭೆಯ ಅಧ್ಯಕ್ಷರು ಕಾರ್ಯಪಾಲಕ ಇಂಜಿನಿಯರ್(ವಿ), ಹೊಳೆನರಸೀಪುರ ರವರಿಗೆ ಸೂಚಿಸಿರುತ್ತಾರೆ ಹಾಗೂ ಉಪ-ವಿಭಾಗಕ್ಕೆ ಲಾರಿ ವ್ಯವಸ್ಥೆಯಾದ ದಿನ ಸಂಬಂದಪಟ್ಟ ಅಧಿಕಾರಿಗಳು ಹಾಗೂ ನೌಕರರು ಬೆಳಿಗ್ಗೆ 7:30ಕ್ಕೆ ಕಛೇರಿಯಲ್ಲಿ ಹಾಜರಿದ್ದು ಲಾರಿಯನ್ನು ಉಪಯೋಗಿಸಿಕೊಳ್ಳಬೇಕೆಂದು ಸೂಚಿಸಿರುತ್ತಾರೆ. |

| | | | | |
|---|---|---|---|---|
| 3 | ನಾಗೇಂದ್ರ, ಕೆಸವತ್ತೂರು. ಫೋ–9668249935 | ಕೊಣನೂರು | ಎಫ್–6 ಸಬ್ಬತ್ತಿ ಫೀಡರ್ ಪದೇ ಪದೇ ಲೈನ್ ಟ್ರಬಲ್ ಬರುತ್ತಿದ್ದು, ವಿದ್ಯುತ್ ಸರಬರಾಜಿನಲ್ಲಿ ತೊಂದರೆಯಾಗುತ್ತಿರುವ ಬಗ್ಗೆ. | ಎಫ್–6 ಸಬ್ಬತ್ತಿ 11ಕೆ.ವಿ ಮಾರ್ಗದಲ್ಲಿ ಬಹಳ ಹಳೆಯದಾದ 4ಎ.ಸಿ.ಎಸ್.ಆರ್ ವಾಹಕವಿದ್ದು ಪದೇ ಪದೇ ತುಂಡಾಗುತ್ತಿರುವುದರಿಂದ, 11ಕೆ.ವಿ ಮಾರ್ಗವನ್ನು ರೀ-ಕಂಡಕ್ಟರಿಂಗ್ ಮಾಡಲು ಅಂದಾಜು ಪಟ್ಟಿ ಸಲ್ಲಿಸಲು ಕೊಣನೂರು ಶಾಖಾದಿಕಾರಿಗಳಿಗೆ ಸೂಚಿಸಲಾಯಿತು. |
| 4 | ನಾಗರಾಜು, ಕಡುವಿನಹೊಸಳ್ಳಿ. ಫೋ–94822106744 | ಕೊಣನೂರು | ಕಡುವಿನಹೊಸಳ್ಳಿ ಗ್ರಾಮದಲ್ಲಿರುವ ಐ.ಪಿ ಪರಿವರ್ತಕವು, ಪರಿವರ್ತಕದ ಮೇಲಿರುವ ಅಕ್ರಮ ಐ.ಪಿ ಸ್ಥಾವರಗಳಿಂದ ಅದಿಕ ಹೊರೆಯಿಂದಾಗಿ, ಪದೇ ಪದೇ ಸುಟ್ಟು ಹೋಗುತ್ತಿರುವ ಬಗ್ಗೆ. | ಕಡುವಿನಹೊಸಳ್ಳಿ ಗ್ರಾಮದಲ್ಲಿರುವ ಐ.ಪಿ ಪರಿವರ್ತಕದ ಮೇಲಿರುವ ಅಕ್ರಮ ಐ.ಪಿ ಸ್ಥಾವರಗಳನ್ನು ತೆರವು ಗೊಳಿಸಲು ಕೊಣನೂರು ಶಾಖಾದಿಕಾರಿಗಳಿಗೆ ಸೂಚಿಸಲಾಯಿತು. |
| 5 | ರಾಜೇಂದ್ರ, ಬೆಳವಾಡಿ ಗ್ರಾಮ ಪಂಚಾಯಿತಿ ಸದಸ್ಯರು, ಬೆಳವಾಡಿ. ಫೋ–8792520238 | ಬಸವಾಪಟ್ಟಣ | ಬೆಳವಾಡಿ ಗ್ರಾಮದಲ್ಲಿ ಕುಡಿಯುವ ನೀರಿನ ಸ್ಥಾವರಕ್ಕೆ ಎಫ್–11 ಬೆಳವಾಡಿ ನಿರಂತರ ಜ್ಯೋತಿ ಫೀಡರ್‌ನಿಂದ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ. | ಬೆಳವಾಡಿ ಗ್ರಾಮದಲ್ಲಿರುವ ಕುಡಿಯುವ ನೀರಿ ಸ್ಥಾವರವು ಗ್ರಾಮದಿಂದ ಹೊರಗೆ ಇದ್ದು ಹಾಲಿ ಎಫ್–1 ಬಸವಾಪಟ್ಟಣ ಐ.ಪಿ ಫೀಡರ್ ಮೇಲಿರುತ್ತದೆ. ಸದರಿ ಸ್ಥಾವರಕ್ಕೆ ನಿರಂತರ ಜ್ಯೋತಿ ಫೀಡರ್‌ನಿಂದ ವಿದ್ಯುತ್ ಸಂಪರ್ಕ ಕಲ್ಪಿಸಿದರೆ, ಐ.ಪಿ ಸ್ಥಾವರಗಳ ಗ್ರಾಹಕರು ವಿದ್ಯುತ್ ಕಳ್ಳತನ ಮಾಡುವ ಸಂಭವ ಹೆಚ್ಚಿರುವುದರಿಂದ, ಗ್ರಾಮ ಪಂಚಾಯಿತಿ ವತಿಯಿಂದ ಗ್ರಾಮಕ್ಕೆ ಓವರ್ ಹೆಡ್ ಟ್ಯಾಂಕ್ ಅಳವಡಿಸಿಕೊಳ್ಳಲು ಸೂಚಿಸಲಾಯಿತು. |
| 6 | ಕೆ.ಜೆ.ಶಿವೇಗೌಡ, ಕಡುವಿನಹೊಸಳ್ಳಿ. ಫೋ–8296482762 | ಕೊಣನೂರು | ಕಡುವಿನಹೊಸಳ್ಳಿ ಗ್ರಾಮದ ವ್ಯಾಪ್ತಿ ರೈಲ್ಸ್ ಕಂಬಗಳನ್ನು ಬದಲಾಯಿಸುವ ಬಗ್ಗೆ. | ಕಡುವಿನಹೊಸಳ್ಳಿ ಗ್ರಾಮದ ವ್ಯಾಪ್ತಿ ರೈಲ್ಸ್ ಕಂಬಗಳನ್ನು ಬದಲಾಯಿಸಲು ಅಂದಾಜು ಪಟ್ಟಿಯನ್ನು ಉಪ-ವಿಬಾಗ ಕಛೇರಿಗೆ ಸಲ್ಲಿಸಲು ಕೊಣನೂರು ಶಾಖಾದಿಕಾರಿಗಳಿಗೆ ಸಭೆಯ ಅಧ್ಯಕ್ಷ ಸೂಚಿಸಿದರು. |

ಇನ್ನಿತರ ಇಲಾಖಾ ಸಂಬಂಧ ವಿಷಯಗಳು ಹಾಗೂ ಮೇಲೆ ತಿಳಿಸಿರುವ ಸಾರ್ವಜನಿಕರ ದೂರುಗಳು ಮತ್ತು ದೂರುಗಳಿಗೆ ಕಲ್ಪಿಸಬಹುದಾದ ಪರಿಹಾರಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮಗಳನ್ನು ತುರ್ತು ಕೈಗೊಳ್ಳಲು ತಿಳಿಸಿ ಸಭೆಯನ್ನು ಮಧ್ಯಾಹ್ನ 2:00 ಘಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ, ಚಾ.ವಿ.ಸ.ನಿ.ನಿ.,
ರಾಮನಾಥಪುರ

**ಪ್ರತಿಯನ್ನು:–**

1. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಲಯ, ಚಾ.ವಿ.ಸ.ನಿ.ನಿ., ಮೈಸೂರು ರವರ ದಯಾಪರ ಮಾಹಿತಿಗಾಗಿ.
2. ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ದಯಾಪರ ಮಾಹಿತಿಗಾಗಿ.
3. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾ.ವಿ.ಸ.ನಿ.ನಿ., ಹೊಳೆನರಸೀಪುರ ರವರ ದಯಾಪರ ಮಾಹಿತಿಗಾಗಿ.
4. ಸಹಾಯಕ ಇಂಜಿನಿಯರ್(ತಾ), ಕಾ ಮತ್ತು ಪಾ ಉಪವಿಭಾಗ, ಚಾ.ವಿ.ಸ.ನಿ.ನಿ. ರಾಮನಾಥಪುರ ರವರಿಗೆ ರವಾನಿಸುತ್ತಾ ಜನ ಸಂಪರ್ಕ ಸಭೆ ನಡಾವಳಿ ಕಡತದಲ್ಲಿ ಇರಿಸಲು ಆದೇಶಿಸಲಾಗಿದೆ.
5. ಶಾಖಾಧಿಕಾರಿಗಳು, ಕಾ ಮತ್ತು ಪಾ ಶಾಖೆ, ರಾಮನಾಥಪುರ/ಕೊಣನೂರು/ಬಸವಾಪಟ್ಟಣ/ದೊಡ್ಡಮಗ್ಗೆ ರವರಿಗೆ.